

# ಪರಿವರ್ತನೆ

**ಮಹಮ್ಮದ್ ರಫೀಕ್ ಕೊಟ್ಟೂರು**

ಕಲೆ: ಸಂತೋಷ್ ಸಸಿಹಿತ್ಲು

ಒಂದೂರಿನಲ್ಲಿ ರಾಮಣ್ಣನೆಂಬ ರೈತನಿದ್ದ. ಆತ ತನ್ನ ಪ್ರಾಮಾಣಿಕತೆಗೆ ಊರಲ್ಲಿಯೇ ಹೆಸರುವಾಸಿಯಾಗಿದ್ದ. ಸುಳ್ಳು, ಮೋಸ, ವಂಚನೆಯಿಂದ ದೂರವಾಗಿದ್ದ, ಆರ್ಥಿಕವಾಗಿಯೂ ಸ್ಥಿತಿವಂತನಾಗಿದ್ದ. ಅವನ ಹೆಂಡತಿ ಸುಮತಿ ಕೂಡ ಹೆಸರಿಗೆ ತಕ್ಕಂತೆ ಗುಣವಂತೆಯಾಗಿದ್ದಳು. ಅವರ ಮಗ ಲೋಹಿತಾಶ್ವ ಮೂರನೇ ತರಗತಿಯಲ್ಲಿ ಓದುತ್ತಿದ್ದ ಪುಟ್ಟ ಬಾಲಕ. ಅಪ್ಪ–ಅಮ್ಮನಂತೆ ಅವನೂ ಶಾಲೆಯ ಎಲ್ಲಾ ಹುಡುಗರಿಗೂ ಶಿಕ್ಷಕರಿಗೂ ಅಚ್ಚು ಮೆಚ್ಚಿನವನಾಗಿದ್ದ. ಈ ಸದ್ಗುಣಗಳಿಗೆ ಅವನ ತಂದೆಯೇ ಪರೋಕ್ಷ ಕಾರಣ ಆಗಿದ್ದರು. ಅವರು ರಾತ್ರಿ ಮಲಗುವಾಗ ಪ್ರತಿ ದಿನ ಅವನನ್ನು ಪಕ್ಕದಲ್ಲಿಯೇ ಮಲಗಿಸಿಕೊಂಡು ಕತೆಗಳನ್ನು ಹೇಳುತ್ತಿದ್ದುದು. ರಾಮಾಯಣ, ಮಹಾಭಾರತ ಅದರೊಳಗಿನ ಉಪ ಕತೆಗಳು ಸೇರಿ ಅನೇಕ ನೀತಿಕತೆಗಳನ್ನು ಹೇಳುತ್ತಿದ್ದರು. ನಿತ್ಯವೂ ಒಂದಲ್ಲ ಒಂದು ಕತೆ ಹೇಳಿದ ನಂತರವೇ ಲೋಹಿತಾಶ್ವ ಮಲಗುತ್ತಿದ್ದ. ಅಪ್ಪನ ಕತೆಗಳು, ಪೋಷಕರ ವ್ಯಕ್ತಿತ್ವ ಅವನನ್ನು ತುಂಬ ಪ್ರಭಾವಿಸಿದ್ದವು. ಅವನು ಎಂದೂ ಸುಳ್ಳನ್ನೇ ಆಡುತ್ತಿರಲಿಲ್ಲ. ಶಾಲೆಯಲ್ಲಿ ಶಿಕ್ಷಕರು ಶಿಕ್ಷೆ ನೀಡಬೇಕಾದರೆ ಬೇರೆ ಮಕ್ಕಳು ತಾವು ಮಾಡಿದ ತಪ್ಪಿಗೆ ಸುಳ್ಳನ್ನು ಹೇಳಿ ತಪ್ಪಿಸಿಕೊಂಡರೆ, ಇವನು ಮಾತ್ರ ಸತ್ಯವನ್ನು ಹೇಳಿ ಹೊಡೆಸಿಕೊಳ್ಳುತ್ತಿದ್ದ.

ರಾಮಣ್ಣನ ಮನೆಗೆ ಸಮೀಪದಲ್ಲಿಯೇ ಅವನ ತಮ್ಮನ ಮನೆ ಇತ್ತು. ಹಾಗಾಗಿ ರಾಮಣ್ಣ ಪಟ್ಟಣಕ್ಕಾಗಲಿ ಅಥವಾ ದೂರದ ಊರಿಗೆ ಹೋಗಬೇಕಾದರೆ ನಿಶ್ಚಿಂತನಾಗಿ ಹೋಗಿ ಬರುತ್ತಿದ್ದ. ಒಮ್ಮೆ ಮಾತ್ರ ರಾಮಣ್ಣನ ಹೆಂಡತಿ ಸುಮತಿಗೆ ತೀವ್ರ ಅನಾರೋಗ್ಯ ಉಂಟಾಗಿದ್ದರಿಂದ ರಾತ್ರೋ ರಾತ್ರಿ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕಾಯಿತು. ರಾಮಣ್ಣ, ಮಗ ಲೋಹಿತಾಶ್ವನಿಗೆ 'ನೀನು ಮನೆಗೆ ಬೀಗ ಹಾಕಿಕೊಂಡು ಚಿಕ್ಕಪ್ಪನ ಮನೆಗೆ ಹೋಗಿ ಮಲಗು' ಎಂದು ಹೇಳಿ ತಕ್ಷಣ ಹೊರಟು ಹೋದರು. ಶಾಲೆಯಲ್ಲಿ ಮನೆಗೆಲಸ ಹೆಚ್ಚು ನೀಡಿದ್ದರಿಂದ ಪುಸ್ತಕಗಳ ಚೀಲವನ್ನು ತೆಗೆದುಕೊಂಡು ಚಿಕ್ಕಪ್ಪನ ಮನೆಗೆ ಹೋಗುವುದೇನು, ಅದನ್ನೆಲ್ಲ ಇಲ್ಲಿಯೇ ಮುಗಿಸಿಕೊಂಡು ಹೋದರಾಯಿತು ಎಂದು ಬರೆಯುತ್ತಾ ಕುಳಿತ. ಸ್ವಲ್ಪ ಹೊತ್ತಿನ ನಂತರ ಅವನಿಗರಿವಿಲ್ಲದೆಯೇ ನಿದ್ದೆಗೆ ಜಾರಿದ, ಬಾಗಿಲು ತೆರೆದೇ ಇತ್ತು.

ಮಧ್ಯರಾತ್ರಿಯ ಹೊತ್ತಿನಲ್ಲಿ ನಡೆದಾಡಿದ ಶಬ್ದ ಕೇಳಿದ ಲೋಹಿತಾಶ್ವನಿಗೆ ಅಪ್ಪ–ಅಮ್ಮ ಬಂದಿರಬೇಕೆಂದು ಎದ್ದು ನೋಡಿದರೆ ನಾಲ್ಕೈದು ಜನ ಅಪರಿಚಿತರು ಮನೆಯ ಮೂಲೆ ಮೂಲೆಯನ್ನು ಹುಡುಕುತ್ತಿದ್ದರು. ಲೋಹಿತಾಶ್ವ ಅವರನ್ನು ನೋಡಿ ಹೆದರದೆಯೇ 'ಯಾರು ನೀವು, ಏನನ್ನು ಹುಡುಕುತ್ತಿರುವಿರಿ' ಎಂದು ಕೇಳಿದ. ನಾವು ನಿಮ್ಮ ಮನೆಯ ಒಡವೆಗಳನ್ನು ಹುಡುಕುತ್ತಿದ್ದೇವೆ. ಎಲ್ಲಿಟ್ಟಿದ್ದೀರಿ? ಎಂದು ಹೆದರಿಸಲು ನೋಡಿದ. ಆದರೆ ಲೋಹಿತಾಶ್ವ ಹೆದರದೇ ನೀವು ಹುಡುಕುತ್ತಿರುವ ಸ್ಥಳದಲ್ಲಿ ಒಡವೆಗಳಿಲ್ಲ. ಅವು ಬಚ್ಚಲು ಮನೆಯ ನೀರು ತುಂಬುವ ಕೊಳಗದಲ್ಲಿ ಬಟ್ಟೆಯ ಗಂಟಿನಲ್ಲಿಟ್ಟು ಅದನ್ನು ಮತ್ತೆ ಪ್ಲಾಸ್ಟಿಕ್‌ನಲ್ಲಿ ಸುತ್ತಿಟ್ಟಿದ್ದಾರೆ ಎಂದು ಹೇಳಿದ. ಕಳ್ಳರಿಗೆ ನಂಬಲಾಗಲಿಲ್ಲ. 'ಇವನು ನಮ್ಮನ್ನು ನೋಡಿ ಹೆದರುತ್ತಲೂ ಇಲ್ಲ, ನಂತರ ಒಡವೆ ಇರುವ ಜಾಗವನ್ನೂ ಹೇಳುತ್ತಿದ್ದಾನಲ್ಲ ಬಹುಶಃ ಸುಳ್ಳು ಹೇಳುತ್ತಿರಬೇಕು ಎಂದು ಒಬ್ಬನನ್ನು ಒಳಗೆ ಹೋಗಿ ನೋಡಲು ಹೇಳಿ ಉಳಿದವರು ಅವನ ಸುತ್ತಲೂ ನಿಂತರು. ಕೆಲವು ನಿಮಿಷಗಳಲ್ಲಿ ಒಡವೆಗಳ ಗಂಟನ್ನು ಒಳಗೆ ಹೋದವ ಕೈಯಲ್ಲಿ ಹಿಡಿದು ಬಂದ. ಆಶ್ಚರ್ಯವಾಯಿತು ಕಳ್ಳರಿಗೆ.

ಆಗ ಒಬ್ಬ ಕಳ್ಳ 'ಅಲ್ಲ ಮಗು ಒಡವೆಗಳಿಟ್ಟಿರುವ ಜಾಗ ನೀನು ಹೇಳದಿದ್ದರೂ ನಾವು ನಿನಗೆ ಏನೂ ಮಾಡುತ್ತಿರಲಿಲ್ಲ ಮತ್ತೇಕೆ ಹೇಳಿದೆ' ಎಂದ. 'ನನ್ನ ತಂದೆ ಯಾವುದೇ ಸಂದರ್ಭದಲ್ಲಿಯೂ ಸುಳ್ಳು ಹೇಳಬಾರದೆಂದು ಹೇಳಿದ್ದಾರೆ. ನೀವು ಸತ್ಯಹರಿಶ್ಚಂದ್ರನ ಕತೆ ಕೇಳಿಲ್ಲವಾ' ಎಂದು ಹೇಳಿದಾಗ ಕಳ್ಳರಿಗೆಲ್ಲರಿಗೂ ನಾಚಿಕೆಯಾಯಿತು, ಆ ಹುಡುಗನ ಮುಂದೆ ಕುಬ್ಜರಾದಂತೆ ಅನಿಸತೊಡಗಿತು, ಒಡವೆಯ ಗಂಟನ್ನು ಮರಳಿ ಕೊಟ್ಟು ಅವನ ಜೊತೆಯಲ್ಲಿ ರಾತ್ರಿ ಕಳೆದರು, ಜೊತೆಗೆ ಅವನ ಅಪ್ಪ ಹೇಳಿದ ಕತೆಗಳನ್ನು ತಮಗೂ ಹೇಳುವಂತೆ ಒತ್ತಾಯಿಸಿದರು. ಕತೆ ಕೇಳುತ್ತಾ ಹಾಗೆಯೇ ಅವನೊಂದಿಗೆ ನಿದ್ದೆ ಹೋದರು. ಬೆಳಿಗ್ಗೆ ರಾಮಣ್ಣ ತನ್ನ ಹೆಂಡತಿಯೊಡನೆ ಮನೆಗೆ ಬಂದಾಗ ಕಳ್ಳರು ತಮ್ಮ ತಪ್ಪಿಗೆ ಕ್ಷಮೆ ಕೋರಿ ಇಂಥ ಮಗನನ್ನು ಪಡೆದ ನೀವೇ ಧನ್ಯರು ಎಂದು ಹೇಳುತ್ತಾ ಲೋಹಿತಾಶ್ವನಿಗೆ 'ಮಗು ನಾವು ಇನ್ನು ಮುಂದೆ ಕಳ್ಳತನ ಮಾಡುವುದಿಲ್ಲ' ಎಂದು ಪ್ರಮಾಣ ಮಾಡಿ ಕೈ ಮುಗಿದು ತಮ್ಮನ್ನು ಪರಿವರ್ತಿಸಿದ ಮಗುವನ್ನು ಮುದ್ದಿಸಿ ಹೊರಟರು.